ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 17-20
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮಹಿಳಾ ಮೀಸಲಾತಿ ಸುತ್ತಾ ಒಂದು ಚರ್ಚೆ

**ಡಾ. ಕೆ.ವಿ.ನೇತ್ರಾವತಿ**
ಉಪನ್ಯಾಸಕರು, ಕನ್ನಡ ವಿಭಾಗ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ

**Abstract:**
*ಭಾರತದಲ್ಲಿ ಮಹಿಳೆಯರ ರಾಜಕೀಯ ಸಬಲೀಕರಣದ ಕುರಿತು ಮಹಿಳಾ ಮೀಸಲಾತಿ ಒಂದು ಮಹತ್ವದ ಸಾಮಾಜಿಕ ಮತ್ತು ರಾಜಕೀಯ ಚರ್ಚೆಯ ವಿಷಯವಾಗಿದೆ. ಮಹಿಳೆಯರಿಗೆ ವಿಧಾನಮಂಡಲಗಳು ಮತ್ತು ಸಂಸತ್ತಿನಲ್ಲಿ ಸಮರ್ಪಕ ಪ್ರತಿನಿಧಿತ್ವ ದೊರಕಿಸುವ ಉದ್ದೇಶದಿಂದ ಮಹಿಳಾ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ಲೇಖನವು ಮಹಿಳಾ ಮೀಸಲಾತಿಯ ಹಿನ್ನೆಲೆ, ಅಗತ್ಯತೆ, ಸಾಧನೆಗಳು ಹಾಗೂ ಅದರ ಸುತ್ತಲಿನ ಪರ–ವಿರೋಧದ ವಾದಗಳನ್ನು ವಿಶ್ಲೇಷಿಸುತ್ತದೆ. ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವಲ್ಲಿ ಮೀಸಲಾತಿಯ ಪಾತ್ರವನ್ನು ಚರ್ಚಿಸಲಾಗಿದೆ. ಜೊತೆಗೆ ಜಾತಿ, ವರ್ಗ, ಗ್ರಾಮೀಣ–ನಗರ ಅಸಮಾನತೆಗಳ ಹಿನ್ನೆಲೆಯಲ್ಲಿ ಉದ್ಭವಿಸುವ ಸವಾಲುಗಳನ್ನು ಪರಿಶೀಲಿಸಲಾಗಿದೆ. ಮಹಿಳಾ ಮೀಸಲಾತಿಯು ಲಿಂಗ ಸಮಾನತೆ ಮತ್ತು ಪ್ರಜಾಪ್ರಭುತ್ವದ ಬಲವರ್ಧನೆಗೆ ಹೇಗೆ ನೆರವಾಗುತ್ತದೆ ಎಂಬುದನ್ನು ಈ ಅಧ್ಯಯನವು ವಿಶ್ಲೇಷಿಸುತ್ತದೆ.*

**Keywords:** *ಮಹಿಳಾ ಮೀಸಲಾತಿ, ರಾಜಕೀಯ ಸಬಲೀಕರಣ, ಲಿಂಗ ಸಮಾನತೆ, ಮಹಿಳಾ ಪ್ರತಿನಿಧಿತ್ವ, ಪ್ರಜಾಪ್ರಭುತ್ವ ಮತ್ತು ಆಡಳಿತ*

## ಪೀಠಿಕೆ

ಭಾರತೀಯ ಸಮಾಜವು ಮೂಲತಃ ಸೌಹಾರ್ದಯುತ ಸಮಾಜವಾಗಿದ್ದು, ತದನಂತರದಲ್ಲಿ ಹುಟ್ಟಿಕೊಂಡ ವೃತ್ತಿ, ಲಿಂಗ, ವರ್ಣ ಆಧಾರಿತ ಮೇಲು ಕೀಳು ಎನ್ನುವ ಸಂಕುಚಿತ ಸಾಂಪ್ರದಾಯಿಕ ನೋಟ ಕ್ರಮದಿಂದಾಗಿ ಈ ಸಮಾಜ ಪಿತೃಪ್ರಭುತ್ವದ ಚೌಕಟ್ಟಿನಲ್ಲಿ ನಲುಗಿತು. ಇದು ಮಹಿಳೆಯರ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯ ಮತ್ತು ತಾರತಮ್ಯಕ್ಕೆ ಮುಖ್ಯ ಕಾರಣವಾಗಿದೆ. ಸತಿಪದ್ಧತಿ, ಬಾಲ್ಯವಿವಾಹ, ವಿಧವೆಯರ ಪುನರ್ ವಿವಾಹ ನಿಷೇಧ, ಲೈಂಗಿಕವಾಗಿ ಸಾಮಾಜಿಕ ಶೋಷಣೆಗೆ ಒಳಪಡಿಸುವ ದೇವದಾಸಿ ಪದ್ಧತಿ, ಮಹಿಳೆಯರಿಗೆ ಆಸ್ತಿ ಹಕ್ಕು ನಿಷೇಧ, ಹೆಣ್ಣು ಭ್ರೂಣ ಹತ್ಯೆ, ವಿದ್ಯೆ ಕಲಿಕೆ ನಿರಾಕರಣೆ, ರಾಜಕೀಯ ಪ್ರವೇಶ ನಿಷೇಧ ಹೀಗೆ ಈ ಶೋಷಣೆ ಅಂದಿನಿಂದ ಇಂದಿನ ವರೆಗೂ ವಿವಿಧ ರೂಪಗಳಲ್ಲಿ ಮುಂದುವರೆದಿದೆ. ಸಾಮಾಜಿಕ ಸುಧಾರಕರು ಇವುಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಅಪಾರವಾಗಿ ಶ್ರಮಿಸಿದ್ದರೂ, ಇವುಗಳನ್ನು ನಿಷೇಧಿಸುವ ನಿಟ್ಟಿನಲ್ಲಿ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಅನೇಕ ಕಠಿಣ ಕಾನೂನುಗಳನ್ನು ಜಾರಿಗೊಳಿಸಿದ್ದರೂ ಸಹ ಅವುಗಳ ಅನುಷ್ಠಾನದಲ್ಲಿ ಸರಕಾರಗಳು ಸೊರಗಿವೆ. ಇವತ್ತಿಗೂ ಬಾರತದಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಹಿಂದುಳಿದಿದ್ದಾರೆ. ಈ ಹಿನ್ನೆಲೆಯಲ್ಲಿ ಜಾಗೃತಿ ಮೂಡಿಸುವ ಪ್ರಯತ್ನಗಳು ನಡೆಯುತ್ತಿದ್ದರೂ ಪಿತೃಪ್ರಭುತ್ವದ ಮನಸ್ಥಿತಿಯನ್ನು

**Please cite this article as:** ನೇತ್ರಾವತಿ, ಕೆ.ವಿ. (2026). ಮಹಿಳಾ ಮೀಸಲಾತಿ ಸುತ್ತಾ ಒಂದು ಚರ್ಚೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(2), 17–20

ಬದಲಾಯಿಸುವುದು ದೊಡ್ಡ ಸವಾಲಾಗಿದೆ. ಭಾರತದಲ್ಲಿ ಮಹಿಳಾ ಶೋಷಣೆ ದೈಹಿಕ ಹಿಂಸೆ ಮಾತ್ರವಾಗಿರದೇ ಅದೊಂದು ಸಾಂಸ್ಥಿಕ ಶೋಷಣೆಯಾಗಿದೆ.

1987ರಲ್ಲಿ ಪ್ರಧಾನ ಮಂತ್ರಿ ರಾಜೀವಗಾಂಧಿ ಅವರ ಸರಕಾರವು ಮಹಿಳೆಯರ ಸ್ಥಾನವನ್ನು ಸುಧಾರಿಸಲು ಸಚಿವೆ ಮಾರ್ಗರೇಟ್ ಆಳ್ವಾ ನೇತೃತ್ವದಲ್ಲಿ ಸಮಿತಿ ರಚಿಸಿ, ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿ ನೀಡಲು ಸಂವಿಧಾನ ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಈ ಮಸೂದೆ ಲೋಕಸಭೆಯಲ್ಲಿ ಅಂಗೀಕಾರ ಆಗಿ ರಾಜ್ಯಸಭೆಯಲ್ಲಿ ಅಂಗೀಕಾರವಾಗುವಲ್ಲಿ ವಿಫಲವಾಯಿತು. 1992 ರಲ್ಲಿ ಪ್ರಧಾನಿ ಪಿ ವಿ ನರಸಿಂಹರಾವ್ ಸರಕಾರವು 73ನೇ ಮತ್ತು 74ನೇ ಸಂವಿಧಾನಿಕ ತಿದ್ದುಪಡಿಯನ್ನು ಅಂಗೀಕರಿಸಿತು. ಇದು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿಯನ್ನು ಕಡ್ಡಾಯಗೊಳಿಸಿತು. ಆದರೆ ಗಂಡಾಳ್ವಿಕೆಯಿಂದ ಮಹಿಳೆಯರ ಸಂಖ್ಯೆ ರಾಜಕೀಯ ಪ್ರವೇಶದಲ್ಲಿ ಗಣನೀಯವಾಗಿ ಏರಲು ಅನೇಕ ಅಡೆತಡೆಗಳು ಏರ್ಪಟ್ಟವು. ಮಹಿಳಾ ಮೀಸಲಾತಿಯನ್ನು ಕಡ್ಡಾಯಗೊಳಿಸಲು ಅಂದಿನ ಸರಕಾರಗಳು ವಿಫಲವಾದವು. ಮಹಿಳಾ ಮೀಸಲಾತಿ ಮಸೂದೆಯನ್ನು ಮೊದಲ ಬಾರಿಗೆ ಎಚ್.ಡಿ.ದೇವೇಗೌಡ ನೇತೃತ್ವದ ಸರಕಾರವು 81ನೇ ತಿದ್ದುಪಡಿ ಮೂಲಕ 1996ರಲ್ಲಿ ಮಂಡಿಸಿತು. 11ನೇ ಲೋಕಸಭೆಯ ವಿಸರ್ಜನೆಯೊಂದಿಗೆ ಮಸೂದೆ ರದ್ದಾಯಿತು. ಅಂದು ಮಹಿಳಾ ಮೀಸಲಾತಿಯಲ್ಲಿ ಒಳಮೀಸಲಾತಿ ಕುರಿತು ಚರ್ಚೆ ನಡೆಯಿತು. ಇದು ಮಸೂದೆ ರದ್ದಾಗಲು ಒಂದು ಕಾರಣವೂ ಆಯಿತು. ಪಿತೃಪ್ರಧಾನದ ಮನಸ್ಥಿತಿ ಅಡಿಯಲ್ಲಿ ಅಪಾರವಾಗಿ ನಲುಗಿದ ಈ ಕಾಯಿದೆ ಸರಿಯಾಗಿ ಅನುಷ್ಠಾನ ಆಗದೆ ಬಹಳ ವರ್ಷಗಳ ಕಾಲ ಮಕಾಡೆ ಮಲಗಿತು.

ಭಾರತೀಯ ಮಹಿಳಾ ಚಳುವಳಿಗಳು ನಿರಂತರವಾಗಿ ಮಹಿಳಾ ಮೀಸಲಾತಿ ಜಾರಿಗಾಗಿ ದೊಡ್ಡ ಚಳುವಳಿಗಳನ್ನು ರೂಪಿಸಿದವು. ಅನೇಕ ಹೋರಾಟವನ್ನು ಮಾಡಿದವು. ಸೆಮಿನಾರ್‌ಗಳನ್ನು ಮಾಡಿ ತಮ್ಮ ಹಕ್ಕೊತ್ತಾಯಗಳನ್ನು ಬರಹರೂಪದಲ್ಲಿ ಸರಕಾರಕ್ಕೆ ಮಂಡಿಸಿದವು. ಆದರೆ ಎಲ್ಲಾ ಸರಕಾರಗಳ ಕಿವಿಗಳು ಕಿವುಡಾದವು. ಲಾಭವಿಲ್ಲದ ಕೆಲಸವನ್ನು ಮಾಡಿ ನಷ್ಟ ಅನುಭವಿಸಲು ಯಾವ ಸರಕಾರಗಳು ತಯಾರಿರಲಿಲ್ಲ. ಲಾಭವನ್ನು, ಬೆಳವಣಿಗೆಯನ್ನು ಹಣದ ಮೂಲಕ ಮಾತ್ರ ನೋಡುವ ಗಂಡಾಳ್ವಿಕೆ ಸರಕಾರಗಳಿಗೆ ಮಹಿಳಾ ಮಸೂದೆ ಅಗತ್ಯವಿರಲಿಲ್ಲ. ಅದು ಅವರಿಗೆ ಅನಗತ್ಯವಾಗಿತ್ತು. ಮಹಿಳಾ ಮೀಸಲಾತಿ ಬಗ್ಗೆ ಮಾತಾಡಿದರೂ ಬರೀ ಕಣ್ಣೊರೆಸುವ ತಂತ್ರ ಮಾತ್ರವಾಗಿತ್ತು.

ಸೆಪ್ಟಂಬರ್ 19, 2023 ರಂದು ಕೇಂದ್ರ ಬಿಜೆಪಿ ಸರಕಾರವು ಹೊಸ ಸಂಸತ್ತು ಕಟ್ಟಡದಲ್ಲಿ ಲೋಕಸಭೆಯಲ್ಲಿ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ 131ನೇ ಸಾಂವಿಧಾನಿಕ ತಿದ್ದುಪಡಿ ಮಹಿಳಾ ಮೀಸಲಾತಿ ಮಸೂದೆಯಾಗಿ ಮಂಡಿಸಿದಾಗ ಲೋಕಸಭೆಯು 20 ಸೆಪ್ಟಂಬರ್ 2023 ರಂದು 454 ಮತಗಳ ಬಹುಮತದಿಂದ ಅಂಗೀಕರಿಸಿತು. ಮಹಿಳಾ ಮೀಸಲಾತಿಯನ್ನು ಕಾನೂನು ಮಾಡಲಾಯಿತು. ಆಗ ವಿರೋಧ ಪಕ್ಷಗಳು 543 ಸ್ಥಾನಗಳಲ್ಲೇ 33%ರ ಮಹಿಳಾ ಮೀಸಲಾತಿಯನ್ನು ಕಲ್ಪಿಸಬೇಕು ಮತ್ತು ಈ ಮೀಸಲಾತಿಯನ್ನು 2024ರ ಲೋಕಸಭೆ ಚುನಾವಣೆಯಲ್ಲಿಯೇ ಅನುಷ್ಠಾನಗೊಳಿಸಬೇಕೆಂದು ಒತ್ತಾಯಿಸಿದವು. ಆದರೆ ಬಿಜೆಪಿ ಸರಕಾರವು ಇದನ್ನು ಒಪ್ಪಲಿಲ್ಲ. ಕಾರಣ ಮಹಿಳಾ ಮೀಸಲಾತಿ ಜಾರಿಯಾಗದೆ ಸೋತಿತು. ಏಪ್ರಿಲ್ 2026 ರಲ್ಲಿ ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ (ನಾರಿಶಕ್ತಿ ವಂದನ್ ಅಧಿನಿಯಮ ಅನುಷ್ಠಾನಕ್ಕೆ) ಸಂಬಂಧಿಸಿದಂತೆ ಮಹತ್ವದ ಬೆಳವಣಿಗೆಗಳು ನಡೆದವು. ಲೋಕಸಭೆ ಮತ್ತು ರಾಜ್ಯವಿಧಾನ ಸಭೆಗಳಲ್ಲಿ ಮಹಿಳೆಯರಿಗೆ 33%

ಮೀಸಲಾತಿ ಕಲ್ಪಿಸುವ ಕಾಯ್ದೆಯನ್ನು ಶೀಘ್ರ ಜಾರಿಗೊಳಿಸಲು 2026ರ ವಿಶೇಷ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ ಮಂಡಿಸಲಾಯಿತು. ಆದರೆ ಅಗತ್ಯದ ವಿಶೇಷ ಬಹುಮತದ ಕೊರತೆಯಿಂದಾಗಿ ಈ ಮಸೂದೆಗೆ ಹಿನ್ನಡೆಯಾಯಿತು.

ಮಹಿಳಾ ಮೀಸಲಾತಿಯು 2026ರ ಜನಗಣತಿ ಆಧರಿಸಿದ ಕ್ಷೇತ್ರ ಮರುವಿಂಗಡಣೆ ಮಾಡಿದ ನಂತರ ಮಹಿಳಾ ಮೀಸಲಾತಿ ಜಾರಿಗೊಳಿಸಲಾಗುವುದು ಎಂದು ಮೋದಿ ಸರಕಾರ ಹೇಳಿತು. ಹಾಗೂ 131ನೇ ಸಂವಿದಾನ ತಿದ್ದುಪಡಿ ಮಸೂದೆಯಲ್ಲಿ 2011 ರ ಜನಗಣತಿ ಆಧರಿಸಿದ ಕ್ಷೇತ್ರ ಮರುವಿಂಗಡಣೆ ನಡೆಸಿ ಮಹಿಳಾ ಮೀಸಲಾತಿಯನ್ನು 2029 ರ ಚುನಾವಣೆಗೆ ಜಾರಿಗೆ ತರುವುದಾಗಿ ಘೋಷಿಸಿತು. ಸಂಸತ್ತಿನ ಸ್ಥಾನಬಲವನ್ನು 816ಕ್ಕೆ ಏರಿಸಿ ಅದರಲ್ಲಿ 33% ಅಂದರೆ 273 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವುದಾಗಿ ಪ್ರಸ್ತಾಪ ಮಾಡಿತು. ಅದರ ವಿರುದ್ದ ವಿರೋಧ ಪಕ್ಷಗಳು ತೀವ್ರಗತಿಯಲ್ಲಿ ತಮ್ಮ ವಾದವನ್ನು ಮಂಡಿಸಿದ್ದರಿಂದ ಎಲ್ಲಾ ರಾಜ್ಯಗಳ ಸ್ಥಾನಗಳನ್ನು 50% ರಷ್ಟು ಸಮಾನವಾಗಿ ಏರಿಸುವ ವಿಷಯವನ್ನು ಪ್ರಸ್ತಾಪಿಸಿತು. ಮಹಿಳಾ ಮಸೂದೆ ಅಲ್ಲೇ ನಿಂತಿತು.

ಇದರ ಹಿಂದಿನ ಕಾರಣಗಳನ್ನು ನೋಡಿದರೆ ಆಳುವ ಕೇಂದ್ರ ಸರಕಾರದಲ್ಲಿ ಪಿತೃಪ್ರಧಾನ ಜಾತಿ ಚಿಂತನೆ ಇರುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಪ್ರಸ್ತುತ 543 ಸೀಟುಗಳಲ್ಲಿ 90% ರಷ್ಟು ಪುರುಷರು ಇದ್ದಾರೆ. 33% ಮೀಸಲಾತಿಯನ್ನು ಮಹಿಳೆಯರಿಗೆ ಕೊಟ್ಟರೆ 180 ಸ್ಥಾನಗಳನ್ನು ಮಹಿಳೆಯರಿಗೆ ಬಿಟ್ಟುಕೊಡಬೇಕಾಗುತ್ತದೆ. ಆದ್ದರಿಂದ ಸಂಸತ್ತಿನ ಸ್ಥಾನಬಲವನ್ನು 543 ರಿಂದ 816ಕ್ಕೆ ಏರಿಸಿದರೆ ಅದರಲ್ಲಿ 33% ಮಹಿಳೆಯರಿಗೆ ನೀಡಿದರೂ ಪುರುಷರಿಗೆ ಸಾಕಷ್ಟು ಸ್ಥಾನಗಳು ಉಳಿಯುತ್ತವೆ ಎಂದು ಪುರುಷರಿಗೆ ತೋರಿಸಿ ಅವರನ್ನು ಓಲೈಸಿಕೊಳ್ಳುವ ಮನಸ್ಥಿತಿಯೂ ಇದರ ಹಿಂದಿದೆ. ಜನಗಣತಿ ಪ್ರತಿ ಹತ್ತು ವರ್ಷಗಳಿಗೊಮ್ಮೆ ನಡೆಯಬೇಕೆಂದು ಕಾನೂನು ಹೇಳುತ್ತದೆ. ಹಾಗೆಯೇ ಇಲ್ಲಿ ಬಂದ ಫಲಿತಾಂಶದ ಹಿನ್ನೆಲೆಯಿಂದ ರಾಜ್ಯ ಜನಸಂಖ್ಯೆಗೆ ಅನುಗುಣವಾಗಿ ಒಟ್ಟಾರೆ ರಾಜ್ಯ ಸ್ಥಾನಬಲವನ್ನು ಏರಿಸಬೇಕೆಂದು ಸಂವಿಧಾನದಲ್ಲಿ ಹೇಳಲಾಗಿದೆ. ಆದರೆ ಇದ್ಯಾವುದನ್ನೂ ಲೆಕ್ಕಿಸದೆ ಬಿಜೆಪಿ ಸರಕಾರ ಸುಳ್ಳು ಭರವಸೆಗಳನ್ನು ಯಾಕೆ ನೀಡುತ್ತಿದೆ ಎನ್ನುವುದು ಗುಟ್ಟಾಗಿ ಉಳಿದಿಲ್ಲ.

ಬಿಜೆಪಿ ಸರಕಾರ ಮಹಿಳಾ ಮೀಸಲಾತಿ ಜಾರಿಗೆ 2026 ರ ಸೆನ್ಸಸ್ ಮತ್ತು ಅದನ್ನು ಆಧರಿಸಿದ ಡಿಲಿಮಿಟೇಷನ್ ಷರತ್ತುಗಳನ್ನು ವಿಧಿಸಿದ್ದು ಯಾಕೆ? ಸಂಸತ್ತಿನ ಸ್ಥಾನಬಲವನ್ನು ಏರಿಸುವ ಪ್ರಸ್ತಾಪ ಯಾಕೆ? 50% ಎಲ್ಲಾ ರಾಜ್ಯಸ್ಥಾನಗಳನ್ನು ಸಮಾನವಾಗಿ ಪರಿಗಣಿಸುವ ಪ್ರಸ್ತಾಪ ಯಾಕೆ? ಇಷ್ಟು ವರ್ಷ ನೆನೆಗುದಿಗೆ ಬಿದಿದ್ದ ಬಿಲ್ಲನ್ನು ತರಾತುರಿಯಲ್ಲಿ ಮಂಡಿಸಿದ್ದು ಯಾಕೆ? ಎಂದು ನೋಡಿದರೆ ಇದರ ಹಿಂದೆ ಓಟ್ ಬ್ಯಾಂಕ್ ರಾಜಕಾರಣ, ಮತೀಯವಾದಿ ಜಾತಿ ಆಧಾರಿತ ಭಾರತೀಯ ಸಾಂಪ್ರದಾಯಿಕ ಮನಸ್ಥಿತಿ ಎದ್ದು ಕಾಣುತ್ತದೆ. ಮಹಿಳಾ ಮೀಸಲಾತಿಯನ್ನು ಇಷ್ಟು ಷರತ್ತುಗಳಲ್ಲಿ ಮಂಡಿಸಿದಾಗ ವಿರೋಧ ಪಕ್ಷಗಳು ಒಪ್ಪಿಕೊಳ್ಳುವುದಿಲ್ಲ ಎಂದು ಅವರಿಗೆ ಮೊದಲೇ ಗೊತ್ತಿದ್ದು ಮಂಡಿಸಿದ್ದು ಯಾಕೆ? ತಾವು ಮಾತ್ರ ಮಹಿಳಾ ಪರ ಎಂದು ತೋರಿಸಿ ಭಾವನಾತ್ಮಕವಾಗಿ ಭಾರತೀಯರನ್ನು ಮೋಡಿ ಮಾಡಿ ಉಳಿದವರು ಮಹಿಳೆಯರ ವಿರೋಧಿಗಳು ಎಂದು ಬಿಂಬಿಸುವುದೇ ಆಗಿದೆ.

ಭಾರತದಲ್ಲಿ ಇಲ್ಲಿವರೆಗೆ ಆಳಿದ ಸರಕಾರಗಳೆಲ್ಲವೂ ಆರೋಗ್ಯಪೂರ್ಣ ಮನಸ್ಥಿತಿಯಿಂದ ಮಹಿಳೆಯರ ಅಭಿವೃದ್ದಿಗಾಗಿ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸುವಲ್ಲಿ ಸೋತಿವೆ. ಕೆಲವು ಸರಕಾರಗಳು ತೀವ್ರವಾಗಿ ನಾವು ಮಹಿಳಾ ವಿರೋಧಿಗಳು ಎಂದು ತೋರಿಸಿದರೆ, ಕೆಲವು ಸರಕಾರಗಳು ನಾವು ಅವರಿಗಿಂತ ಕಡಿಮೆ ಮಹಿಳಾ ವಿರೋಧಿಗಳು ಎಂದು ತೋರಿಸಿವೆ. ಯಾವ ಸರಕಾರಗಳಿಗೂ ಮಹಿಳೆಯರ ಅಭಿವೃದ್ಧಿ ಬೇಕಾಗಿಲ್ಲ. ಕಾಟಾಚಾರಕ್ಕೆ ಜನರ

ಕಣ್ಣೋರೆಸುವ ನಿಟ್ಟಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಮುಟ್ಟಿ ಮತ್ತೆ ಕೈ ಬಿಡುವ ಆಟಗಳು ಅವರಿಗೆ ಜನರೊಂದಿಗೆ ಆಡುವ ರಾಜಕೀಯ ಆಟಗಳಾಗಿವೆ.

ಒಂದು ಸಮಾಜದ ಅಭಿವೃದ್ಧಿಯನ್ನು ಅಲ್ಲಿನ ಮಹಿಳೆಯರ ಅಭಿವೃದ್ಧಿಯ ಹಿನ್ನೆಲೆಯಿಂದ ಗುರುತಿಸಬೇಕಾಗುತ್ತದೆ ಎಂದು ಅಂಬೇಡ್ಕರ್ ಅವರು ಹೇಳುತ್ತಾರೆ. ಅದರಿಂದ ಜನಸಂಖ್ಯೆಯಲ್ಲಿ ಪುರುಷರಷ್ಟೇ ಸಮಾನವಾಗಿ ಮಹಿಳೆಯರೂ ಇದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ಮೀಸಲಾತಿ ಪುರುಷರಿಗೂ ಮಹಿಳೆಯರಿಗೂ ಸಮಾನವಾಗಿ 50% ಜಾರಿಯಾಗಬೇಕು. ಅಂಬೇಡ್ಕರ್ ಅವರು ಹೇಳುವಂತೆ ಹಿಂದುಳಿದ ಜಾತಿಗಳು ಮುಖ್ಯವಾಗಿ ರಾಜಕೀಯ ಅಧಿಕಾರವನ್ನು ಪಡೆದು ತಮ್ಮ ಅಭಿವೃದ್ಧಿಗೆ ಬೇಕಾದ ಕಾನೂನುಗಳನ್ನು ತಾವೇ ರೂಪಿಸಿಕೊಳ್ಳುವಂತಾಗಬೇಕು. ಆಗ ನಿಜವಾದ ಅಭಿವೃದ್ಧಿ ಸಾಧ್ಯವಾಗುತ್ತದೆ ಎನ್ನುತ್ತಾರೆ. ಅದರಲ್ಲಿ ಕೆಳಜಾತಿ, ಹಿಂದುಳಿದ ಜಾತಿಗಳಿಗೆ ಸಾಮಾಜಿಕ ನ್ಯಾಯ ದಕ್ಕುವ ಸಲುವಾಗಿ ಮಹಿಳಾ ಒಳ ಮೀಸಲಾತಿ ಜಾರಿಯಾಗಬೇಕು. ಇವತ್ತಿನ ರಾಜಕೀಯ ಪಕ್ಷಗಳಲ್ಲಿ ಗರಿಷ್ಠ ಪ್ರಮಾಣದಲ್ಲಿ ಮೇಲ್ಜಾತಿ ಮೇಲ್ವರ್ಗದ ಮಹಿಳೆಯರೇ ಇದ್ದಾರೆ. ಕೆಳಜಾತಿಯ ಮಹಿಳೆಯರು ಮುಖ್ಯವಾಹಿನಿಗೆ ಬರಲು ಮಹಿಳಾ ಮೀಸಲಾತಿ ಮುಖ್ಯ ದಾರಿಯಾಗಬೇಕು. ಮಹಿಳೆಯರ, ಕೆಳಜಾತಿ ಮಹಿಳೆಯರ ಚಿಂತನೆಗಳು ರಾಜಕೀಯವಾಗಿ ಚಾಲ್ತಿಗೆ ಬರಲು ಮಹಿಳಾ ಮೀಸಲಾತಿ ವೇದಿಕೆಯಾಗಿ ರೂಪುಗೊಳ್ಳಬೇಕು. ಆ ಮೂಲಕ ಸಾಮಾಜಿಕ ನ್ಯಾಯ ಎಲ್ಲರಿಗೂ ದಕ್ಕುವಂತಾಗಬೇಕು. ಮಹಿಳಾ ಮೀಸಲಾತಿಗೆ ಅಡ್ಡಿಯಾಗಿರುವ ಎಲ್ಲಾ ಷರತ್ತುಗಳನ್ನು ಕೈ ಬಿಟ್ಟು ಮುಕ್ತ ಮನಸ್ಥಿತಿಯಿಂದ ಮಹಿಳಾ ಮೀಸಲಾತಿನ್ನು ಜಾರಿಗೊಳಿಸಬೇಕು. ಪಿತೃ ಪ್ರಧಾನ ಮನಸ್ಥಿತಿಯಿಂದ, ಜಾತಿ ಅಹಂನ ಮನಸ್ಥಿಯಿಂದ ಹೊರಬಂದು, ಕೇವಲ ಮನುಷ್ಯರಾಗಿ ನೋಡುವಂತಾದರೆ, ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಕಣ್ಣಿನಿಂದ ವಾಸ್ತವವನ್ನು ನೋಡುವಂತಾದರೆ ಮಹಿಳಾ ಮೀಸಲಾತಿ ಹಿನ್ನೆಲೆಯಿಂದ ನಿಜವಾದ ಸಾಮಾಜಿಕ ನ್ಯಾಯ ಜಾರಿಗೊಳ್ಳಲು ಸಾಧ್ಯವಾಗುತ್ತದೆ. ಇದಕ್ಕೆ ಭಾರತದ ಪ್ರತಿಯೊಬ್ಬ ಪ್ರಜೆಯೂ ಮಹಿಳಾ ಮೀಸಲಾತಿ ಜಾರಿಗಾಗಿ ಧನಿ ಎತ್ತುವ ತುರ್ತಿದೆ.

**ಪರಾಮರ್ಶನ ಗ್ರಂಥಗಳು**


- ಗಾಯತ್ರಿ, ಎನ್. (2012). *ಮಹಿಳಾ ಮೀಸಲಾತಿ ಮತ್ತು ಲಿಂಗ ರಾಜಕಾರಣ.* ಲಡಾಯಿ ಪ್ರಕಾಶನ
- ಉಮಾ ಚಕ್ರವರ್ತಿ. *ಜಾತಿ ಮತ್ತು ಲಿಂಗತ್ವದ ಒಳನೋಟ್ಟಿ.* (ಅನು, ಎನ್.ಗಾಯತ್ರಿ, ಮತ್ತು ಆರ್. ಪೂರ್ಣಿಮಾ) ಹಿತೈಷಿಣಿ ಪ್ರಕಾಶನ.